ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

23

ಇಲಾಖೆ / ವಿಷಯ : DEPARTMENT / SUBJECT: ಸಂಸತ್ ಅಧಿವೇಶನ ಚರ್ಚೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 19/9/2020

# ಜಿಎಸ್‌ಟಿ ನಷ್ಟ: ಶೀಘ್ರ ತೀರ್ಮಾನ

## ಪೂರಕ ಬೇಡಿಕೆಗೆ ಲೋಕಸಭೆ ಸಮ್ಮತಿ । ಮನ್‌ರೇಗಾಕ್ಕೆ ಲಕ್ಷ ಕೋಟಿ ರೂ.

**ಹೊಸದಿಲ್ಲಿ:** ರಾಜ್ಯಗಳಿಗೆ ಜಿಎಸ್‌ಟಿ ನಷ್ಟವನ್ನು ಯಾವ ರೀತಿ ಭರಿಸಿಕೊಡಬೇಕು ಎಂಬ ಕುರಿತು ಜಿಎಸ್‌ಟಿ ಮಂಡಳಿ ತೀರ್ಮಾನ ಕೈಗೊಳ್ಳುತ್ತದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಬಜೆಟ್ ಪೂರಕ ಬೇಡಿಕೆ ಮೇಲೆ ಲೋಕಸಭೆಯಲ್ಲಿ ಶುಕ್ರವಾರ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, ''ದೇವರು ಸೃಷ್ಟಿಸಿದ ಅಸಾಮಾನ್ಯ ಸನ್ನಿವೇಶದಿಂದ ಆದಾಯ ಕೊರತೆ ಎದುರಾಗಿದೆ. ಆದರೂ ಜಿಎಸ್‌ಟಿ ಮಂಡಳಿ ಈ ಕುರಿತು ಚರ್ಚೆ ನಡೆಸಲಿದೆ. ಎಲ್ಲ ರಾಜ್ಯಗಳಿಗೂ ಅನ್ವಯವಾಗುವಂತಹ ನಷ್ಟ ಪರಿಹಾರ ಸೂತ್ರವನ್ನು ಮಂಡಳಿ ಸಭೆಯಲ್ಲಿ ಕೈಗೊಳ್ಳಲಾಗುವುದು,'' ಎಂದು ತಿಳಿಸಿದರು.

''ಪೂರಕ ಬೇಡಿಕೆಯಲ್ಲಿ ಮಂಡಿಸಲಾಗಿರುವ ಮೊತ್ತದ ಬಹುಭಾಗ ಜನಕೇಂದ್ರಿತ ಯೋಜನೆಗಳಿಗೆ ವೆಚ್ಚವಾಗಲಿದೆ. ಮನ್‌ರೇಗಾ ಯೋಜನೆಗೆ 40 ಸಾವಿರ ಕೋಟಿ ರೂ. ನೀಡಲಾಗುತ್ತದೆ. ಬಜೆಟ್‌ನಲ್ಲಿ ಘೋಷಿಸಿದ್ದ 61,500 ಕೋಟಿ ರೂ. ಜತೆಗೆ ಹೆಚ್ಚುವರಿಯಾಗಿ ಈ ಮೊತ್ತ ನೀಡಲಾಗುವುದು. ಇದರಿಂದ ಇದೇ ಮೊದಲ ಬಾರಿಗೆ ಮನ್‌ರೇಗಾಕ್ಕೆ ಒಂದು ಲಕ್ಷ ಕೋಟಿ ರೂ. ಅನುದಾನ ನೀಡಿದಂತಾಗುತ್ತದೆ. ಪೂರಕ ಬೇಡಿಕೆಯಲ್ಲಿನ ಬಹುಪಾಲನ್ನು ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಗೂ ಮೀಸಲಿಡಲಾಗುವುದು,'' ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದರು.



ಸದನವು ಧ್ವನಿಮತದ ಮೂಲಕ 2.35 ಲಕ್ಷ ಕೋಟಿ ರೂ. ಪೂರಕ ಬೇಡಿಕೆಗಳಿಗೆ ಲೋಕಸಭೆ ಅನುಮೋದನೆ ನೀಡಿತು. ಇದರಲ್ಲಿ 1.66 ಲಕ್ಷ ಕೋಟಿ ರೂ. ಕೋವಿಡ್-19 ನಿರ್ವಹಣೆಗೆ ಬಳಕೆಯಾಗಲಿದೆ. ಇದಕ್ಕೂ ಮುನ್ನ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಪ್ರತಿಪಕ್ಷ ಮುಖಂಡರು, ದೇಶದ ಆರ್ಥಿಕತೆ ಪಾತಾಳಕ್ಕೆ ಕುಸಿದಿದ್ದರೂ ಅರ್ಥ ವ್ಯವಸ್ಥೆಗೆ ಉತ್ತೇಜನ ನೀಡಲು ಸರಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಟೀಕಿಸಿದರು.

### ಆರೋಗ್ಯ ಕಾರ್ಯಕರ್ತರ ಕುರಿತು ಮಾಹಿತಿ ಇಲ್ಲ

ದೇಶದಲ್ಲಿ ಕೊರೊನಾ ಸೋಂಕು ತಗಲಿರುವ ಹಾಗೂ ಸೋಂಕಿನಿಂದ ಮೃತಪಟ್ಟಿರುವ ಆರೋಗ್ಯ ಕಾರ್ಯಕರ್ತರ ಮಾಹಿತಿಯನ್ನು ಕೇಂದ್ರ ಸರಕಾರ ನಿರ್ವಹಿಸುವುದಿಲ್ಲ ಎಂದು ಆರೋಗ್ಯ ಖಾತೆ ಸಹಾಯಕ ಸಚಿವ ಅಶ್ವಿನಿ ಚೌಬೆ ಶುಕ್ರವಾರ ಲೋಕಸಭೆಗೆ ತಿಳಿಸಿದರು.

''ಆರೋಗ್ಯ ಕಾರ್ಯಕರ್ತರ ಮಾಹಿತಿಯನ್ನು ರಾಜ್ಯಗಳು ನಿರ್ವಹಿಸಬೇಕು. ಆದರೆ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ವಿಮಾ ಪ್ಯಾಕೇಜ್ ಸೌಲಭ್ಯ ಪಡೆದಿರುವ ಆರೋಗ್ಯ ಕಾರ್ಯಕರ್ತರ ಮಾಹಿತಿಯನ್ನು ಮಾತ್ರ ಕೇಂದ್ರ ನಿರ್ವಹಿಸುತ್ತದೆ,'' ಎಂದು ತಿಳಿಸಿದರು. ಲಾಕ್‌ಡೌನ್ ಸಮಯದಲ್ಲಿ ಮೃತಪಟ್ಟ ವಲಸೆ ಕಾರ್ಮಿಕರ ಕುರಿತಾದ ಅಂಕಿ ಅಂಶ ಇಲ್ಲ ಎಂದು ಇದೇ ಅಧಿವೇಶನದಲ್ಲಿ ಸರಕಾರ ಹೇಳಿತ್ತು. ಅದು ವ್ಯಾಪಕ ಟೀಕೆಗೆ ಗುರಿಯಾಗಿತ್ತು.